**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ. ಸಿ. ನಂ. 406 /2024**

ಸಿಡಬ್ಲ್ಯೂ-01/ಪಿಡಬ್ಲ್ಯೂ-01

| | |
|---|---|
| ಸಾಕ್ಷಿದಾರರ ಹೆಸರು | ನಿಂಗಪ್ಪ ಕಾಳಂಗಿ |
| ತಂದೆ ಹೆಸರು | ಬಸಟೆಪ್ಪ |
| ವಯಸ್ಸು | 45 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಶಂಕ್ರಿಕೊಪ್ಪ ಗ್ರಾಮ |

**ದಿನಾಂಕ : 22-04-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ಚಾಸಾ-2 ಮತ್ತು 3 ರವರ ಪರಿಚಯ ಇರುತ್ತದೆ. ಚಾಸಾ-4 ನನ್ನ ಹೆಂಡತಿ, ಚಾಸಾ-5 ನನ್ನ ಮಗ. ಚಾಸಾ-6 ಮತ್ತು 7 ರವರ ಪರಿಚಯ ಇರುತ್ತದೆ.

2. 2021 ರಲ್ಲಿ ನಾನು ಶಂಕ್ರಿಕೊಪ್ಪ ಗ್ರಾಮದ ಸ ನಂಃ 7/23 ರ ಒಟ್ಟು ಜಮೀನಿನ ಪೈಕಿ 13 ಗುಂಟೆ ಜಮೀನನ್ನು 1 ನೇ ಆರೋಪಿಯಿಂದ ಖರೀದಿ ಮಾಡಿಕೊಂಡಿದ್ದೆ. ಖರೀದಿ ಮಾಡಿದ ನಂತರ ಸುಮಾರು 2-3 ವರ್ಷಗಳು ಸದರಿ ಜಮೀನಿಗೆ ಓಡಾಡಲು, ಟ್ರಾಕ್ಟರ್ ಮತ್ತು ಎತ್ತಿನ ಗಾಡಿಗಳನ್ನು ಹೊಡೆದುಕೊಂಡು ಹೋಗಲು 18 ಅಡಿ ಅಗಲದ ಜಾಗವನ್ನು ನೀಡಿದ್ದು, ಆ ಕಾರಣಕ್ಕೆ ನಾನು ಖರೀದಿ ಮಾಡಿದ ಜಮೀನಿನಲ್ಲಿಯೇ ಮನೆಯನ್ನು ನಿರ್ಮಿಸಿದ್ದೆ. ನಾನು ಖರೀದಿ ಮಾಡಿದ ಜಮೀನಿನ ಮೇಲೆ ಆರೋಪಿಗಳು ಬ್ಯಾಂಕಿನಲ್ಲಿ ಸಾಲವನ್ನು ಪಡೆದಿದ್ದು, ಸದರಿ ಸಾಲವನ್ನು ಮರುಪಾವತಿ ಮಾಡುವಂತೆ 1 ನೇ ಆರೋಪಿಗೆ ಕೇಳಿದ್ದೆ. ಸದರಿ ಕೋರಿಕೆಗೆ 1 ನೇ ಆರೋಪಿಯು ಯಾವುದೇ ಸಾಲವನ್ನು ತೀರಿಸುವುದಿಲ್ಲ ಎಂದು ಕೋಪಗೊಂಡು ಸದರಿ ರಸ್ತೆಯಲ್ಲಿ ಓಡಾಡದಂತೆ ತೊಂದರೆ ನೀಡಿರುತ್ತಾರೆ.

3. ಸದರಿ ರಸ್ತೆಯ ವಿಚಾರವಾಗಿ ದಿಃ 02-11-2023 ರಂದು ಮಧ್ಯಾಹ್ನ 12.30 ರ ಸಮಯಕ್ಕೆ ಚಕ್ಕಡಿಯನ್ನು ತೆಗೆದುಕೊಂಡು ನಾನು ಖರೀದಿ ಮಾಡಿದ ಸದರಿ ಜಮೀನಿಗೆ ಹೋಗುತ್ತಿದ್ದಾಗ, 1 ನೇ ಆರೋಪಿಯು ನ್ನನನ್ನು ತಡೆ ಹಿಡಿದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಆಗ 1 ನೇ ಆರೋಪಿಯು ಇತರ 7-9 ಆರೋಪಿಗಳೊಂದಿಗೆ ಸೇರಿಕೊಂಡು ನನ್ನ ಕತ್ತಿಗೆ ಟವಲನ್ನು ಹಾಕಿ ನನ್ನ ಉಸಿರುಗಟ್ಟಿಸಲು ಪ್ರಯತ್ನ ಪಟ್ಟಿರುತ್ತಾರೆ. ಆರೋಪಿಗಳ ಪೈಕಿ ರುದ್ರಪ್ಪ ತಂದೆ ಈರಪ್ಪ ಮಲಕಣ್ಣನವರು ಕುಡುಗೋಲನ್ನು ತಂದು ನನ್ನ ತಲೆಗೆ ಹಲ್ಲೇ ಮಾಡಿರುತ್ತಾನೆ. ಆಗ ನನ್ನ ಹೆಂಡತಿ ಚಾಸಾ-4 ರವರು ನನ್ನನ್ನು ಬಿಡಿಸಿಕೊಳ್ಳಲು ಬಂದಿದ್ದು, ನೀನು ಬಂದಿದ್ದೀಯಾ ಎಂದ ಹೇಳಿ ಆಕೆಯ ಸೀರೆಯನ್ನು, ರವಿಕೆಯನ್ನು ಮತ್ತು ಜಡೆಯನ್ನು ಹಿಡಿದು ಎಳೆದಾಡಿರುತ್ತಾರೆ. ಅದರ ಜೊತೆಗೆ ಚಾಸಾ-4 ರವರಿಗೆ ಹಲ್ಲೇ ಮಾಡಿರುತ್ತಾರೆ. ನಮ್ಮನ್ನು ಬಿಡಿಸಿಕೊಳ್ಳಲು ಬಂದ ನನ್ನ ಮಗ ಚಾಸಾ-5 ರವರಿಗೂ ಆರೋಪಿಗಳು ಅವಾಚ್ಯ ಶಬ್ದಗಳಿಂದ ಬೈದು, ಒಂದು ಬಡಿಗೆಯಲ್ಲಿ ಸೊಂಟದ ಭಾಗಕ್ಕೆ ಹೊಡೆದಿರುತ್ತಾರೆ.

4. ಜಗಳವನ್ನು ನೋಡಿದ ಚಾಸಾ-2 ಮತ್ತು 6 ರವರು ಜಗಳವನ್ನು ಬಿಡಿಸಿರುತ್ತಾರೆ. ಕಡೆಗೆ ಇಂದು ಉಳಿದುಕೊಂಡಿದ್ದೀರಿ ಮತ್ತೊಮ್ಮೆ ಸಿಕ್ಕರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದರು. ಘಟನೆಯಲ್ಲಿ ಗಾಯಗೊಂಡಿದ್ದ ನಾನು ಚಿಕಿತ್ಸೆಯನ್ನು ಪಡೆಯಲು ಹಾವೇರಿಯ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇನೆ. ಸುಮಾರು 2 ದಿನಗಳವರೆಗೆ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿದ್ದೆ. ಆಸ್ಪತ್ರೆಯಿಂದ ಬಿಡುಗಡೆಗೊಂಡು ಬಂದ ನಂತರ ಪಿರ್ಯಾದನ್ನು ದಾಖಲಿಸುವ ಬಗ್ಗೆ ಗ್ರಾಮದ ಹಿರಿಯರಲ್ಲಿ ಹೇಳಿದ್ದು, ಅವರು ಪ್ರಕರಣ ಮತ್ತು ದಾರಿಯ ವಿಷಯವನ್ನು ರಾಜೀ ಮೂಲಕ ಬಗೆಹರಿಸುತ್ತೇವೆಂದು ತಿಳಿಸಿದ ಕಾರಣಕ್ಕೆ ಆಗಲೇ ಪಿರ್ಯಾದನ್ನು ದಾಖಲಿಸಿರುವುದಿಲ್ಲ. ಅದರಂತೆ ಗ್ರಾಮದಲ್ಲಿ ಪಂಚಾಯಿತಿ ನಡೆದರೂ ಆರೋಪಿಗಳು ರಾಜೀಗೆ ಒಪ್ಪದ ಕಾರಣ, ಕಡೆಗೆ ದಿಃ 24-11-2023 ರಂದು ಪಿರ್ಯಾದನ್ನು ಆಡೂರು ಪೊಲೀಸ್ ಠಾಣೆಯಲ್ಲಿ ದಾಖಲಿಸಿರುತ್ತೇನೆ. ಸಾಕ್ಷಿಯು ತಾನು



ನೀಡಿದ್ದೇನೆ ಎಂದು ಹೇಳುವ ಪಿರ್ಯಾದನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-1 ಎಂದು, ಅದರಲ್ಲಿ ಸಾಕ್ಷಿ ಗುರುತಿಸಿದ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಸದರಿ

ಪಿರ್ಯಾದನ್ನು ನಾನು ನೀಡಿದ ಮಾಹಿತಿಯಂತೆ ಚಾಸಾ-6 ರವರು ಬರೆದಿರುತ್ತಾರೆ. ಪಿರ್ಯಾದಿಯಲ್ಲಿ ಇರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ.

5. ದಿಃ 25-11-2023 ರಂದು ನಾನು ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 12 ರಿಂದ 1 ಗಂಟೆ ಅವಧಿಯಲ್ಲಿ ಪೋಲೀಸರು ಪಂಚನಾಮೆ ಬರೆದಿರುತ್ತಾರೆ. ಪಂಚನಾಮೆಯನ್ನು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ಅದೇ ಸಮಯಕ್ಕೆ ಪೊಲೀಸರು ಒಂದು ಛಾಯಾ ಚಿತ್ರ ತೆಗೆದುಕೊಂಡಿರುತ್ತಾರೆ. ಪಂಚನಾಮೆ ಸಮಯಕ್ಕೆ ಪೊಲೀಸರು ಒಂದು ಮರದ ಕೋಲನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು ನಿ.ಪಿ-2 ಎಂದು, ಅದರಲ್ಲಿಯ ಸಾಕ್ಷಿ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಛಾಯಾ ಚಿತ್ರ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಮರದ ಬಡಿಗೆಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು.

6. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ 1 ರಿಂದ 3, 6 ರಿಂದ 10 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಅವರನ್ನು ಹೊರತುಪಡಿಸಿ ಘಟನೆಯಲ್ಲಿ ರತ್ನಮ್ಮ ಕೋಂ ಶಿವಬಸಪ್ಪ ಮಲಕಣ್ಣನವರ, ಲಕ್ಷ್ಮೀ ಕೋಂ ಶಂಕರಲಿಂಗಪ್ಪ ಮಲಕಣ್ಣನವರ ಸಹ ಭಾಗೀ ಆಗಿದ್ದರು. ಅವರ ನೋಡಿದರೆ ಗುರುತಿಸಬಲ್ಲೇ. ಘಟನೆಗೆ ಸಂಬಂಧಿಸಿದಂತೆ ನಾನು ಮರು ಹೇಳಿಕೆ ನೀಡಿರುವುದಿಲ್ಲ.

- 4 -

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ**

1. ಘಟನೆಯು ರಾತ್ರಿ 12.30 ರ ಸಮಯಕ್ಕೆ ಆಗಿತ್ತು ಎಂದರೆ ಸರಿಯಲ್ಲ. ಘಟನೆಯಲ್ಲಿ ನನಗೆ 1 ರಿಂದ 3 ಹಾಗೂ 6 ರಿಂದ 10 ನೇ ಆರೋಪಿಗಳು ಅವರ ಕೈಮುಷ್ಟಿಯಿಂದ ನನಗೆ ಹಲ್ಲೇ ಮಾಡಿದ್ದರು ಎಂದರೆ ಸರಿ. ಅವರು ನನ್ನನ್ನು ಮೇಲಕ್ಕೆ ಎತ್ತಿ ನೆಲಕ್ಕೆ ಒಗೆದಿದ್ದ ಕಾರಣಕ್ಕೆ ಗಾಯಗಳು

ಆಗಿದ್ದವು ಎಂದರೆ ಸರಿ. 7 ರಿಂದ 10 ನೇ ಆರೋಪಿಗಳು ನನ್ನ ಮಗನಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಅಲ್ಲದೇ ಕೈಗಳಿಂದ ಹಲ್ಲೇ ಮಾಡಿದ್ದರು ಎಂದರೆ ಸರಿ. ಪಂಚನಾಮೆಯನ್ನು ಬೆಳಗ್ಗೆ 11 ರಿಂದ ಮಧ್ಯಾಹ್ನ 12 ರ ಅವಧಿಯಲ್ಲಿ ಪೊಲೀಸರು ಜರುಗಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 12 ರಿಂದ 1.00 ಗಂಟೆ ಅವಧಿಯಲ್ಲಿ ಜರುಗಿಸಿರುತ್ತಾರೆ ಎಂದು ನುಡಿಯುತ್ತಾರೆ. ಘಟನೆಯು ನಡೆದು ಒಂದು ವರ್ಷ ಕಳೆದಿರುವುದರಿಂದ ಸಮಯದ ಬಗ್ಗೆ ಸರಿಯಾಗಿ ನೆನಪಿಲ್ಲಎಂದರೆ ಸಾಕ್ಷಿಯು ನನಗೆ ಅಪಘಾತ ಆಗಿದ್ದ ಕಾರಣಕ್ಕೆ ನೆನಪಿನ ಶಕ್ತಿ ಕಡಿಮೆ ಎಂದು ನುಡಿಯುತ್ತಾರೆ.

2. ದಿಃ 25-11-2023 ರಂದು ಶಿವಬಸಪ್ಪ ಮತ್ತು ಅವನ ಮಕ್ಕಳಾದ ಶಂಕರಲಿಂಗ, ವೀರೇಶ ಮತ್ತು ಶರಣ ಶಂಕ್ರಪ್ಪ ಮಲಕಣ್ಣನವರ ಸೇರಿಕೊಂಡು ನನ್ನ ಕುತ್ತಿಗೆಗೆ ಟವೆಲ್ ನಿಂದ ಬಿಗಿಯಾಗಿ ಹಿಡಿದುಕೊಂಡು ಕೈಗಳಿಂದ ಮುಷ್ಟಿ ಹೊಡೆದಿದ್ದರು ಎಂದು ಮರು ಹೇಳಿಕೆ ನೀಡಿದ್ದೆ ಎಂದರೆ ಸರಿ. ಸದರಿ ಮರು ಹೇಳಿಕೆಯಲ್ಲಿ ಶಂಕರ ಲಿಂಗ ಎಂಬುವವರು ಬಡಿಗೆಯಿಂದ ನನ್ನ ತಲೆಗೆ ಹೊಡೆದು ರಕ್ತಗಾಯ ಪಡಿಸಿದ್ದರು ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಅದೇ ಮರು ಹೇಳಿಕೆಯಲ್ಲಿ ರತ್ನವ್ವ ಮಲಕಣ್ಣನವರ ಮತ್ತು



ಲಕ್ಷ್ಮೀ ಮಲಕಣ್ಣನವರು ಹೊಡೆ ಬಡೆ ಮಾಡಿರುವುದಿಲ್ಲ ಎಂದು ಮರು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿಗಳ ಪರ ಶ್ರೀ ಎಸ್.ಬಿ.ಎಸ್ ವಕೀಲರಿಂದ:**

ಆರೋಪಿಗಳು ಬೇರೆ ವಕೀಲರನ್ನು ನೇಮಕ ಮಾಡಿಕೊಳ್ಳುವುದಾಗಿ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ನ್ಯಾಯ ಮತ್ತು ಸಮ್ಮತಿ ಆಧಾರದ ಮೇಲೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್

ಸಾಕ್ಷಿದಾರರ ಸಹಿ